ಪ್ರಸ್ತಾವ ಮಂಡಿಸಲ್ಪಟ್ಟಿತು

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ

ಅ) ಕರ್ನಾಟಕ ವಿಧಾನ ಸಭೆಯು ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ ೨೬೫(೧)ನೇ ನಿಯಮದ ಅನುಸಾರವಾಗಿ ಈ ಸಭೆ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಗೆ ಹನ್ನೆರಡು ಜನ ಸದಸ್ಯರನ್ನು ಚುನಾಯಿಸುವುದು,

ಆ) ಕರ್ನಾಟಕ ವಿಧಾನ ಸಭೆಯು ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ ೨೬೮ (೧)ನೇ ನಿಯಮದ ಅನುಸಾರವಾಗಿ ಈ ಸಭೆ ಅಂದಾಜುಗಳ ಸಮಿತಿಗೆ ಹದಿನೈದು ಜನ ಸದಸ್ಯರನ್ನು ಚುನಾಯಿಸುವುದು,

ಇ) ಕರ್ನಾಟಕ ವಿಧಾನ ಸಭೆಯು ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ ೨೭೧(೧)ನೇ ನಿಯಮದ ಅನುಸಾರವಾಗಿ ಈ ಸಭೆ ಸಾರ್ವಜನಿಕ ಉದ್ದಿಮೆಗಳ ಸಮಿತಿಗೆ ಒಂಭತ್ತು ಜನ ಸದಸ್ಯರನ್ನು ಚುನಾಯಿಸುವುದು

ಈ) ಕರ್ನಾಟಕ ವಿಧಾನ ಸಭೆಯು ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ ೨೭೨(೧)ನೇ ನಿಯಮದ ಅನುಸಾರವಾಗಿ ಈ ಸಭೆ ಹಕ್ಕು ಭಾದ್ಯತಾ ಸಮಿತಿಗೆ ಏಳು ಜನ ಸದಸ್ಯರನ್ನು ಚುನಾಯಿಸುವುದು.

ಉ) ಕರ್ನಾಟಕ ವಿಧಾನ ಸಭೆಯು ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ ೨೭೭ (೧)ನೇ ನಿಯಮದ ಅನುಸಾರವಾಗಿ ಈ ಸಭೆ ಅಧೀನ ಶಾಸನ ರಚನಾ ಸಮಿತಿಗೆ ಎಂಟು ಜನ ಸದಸ್ಯರನ್ನು ಚುನಾಯಿಸುವುದು.

ಊ) ಕರ್ನಾಟಕ ವಿಧಾನ ಸಭೆಯು ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ ೨೮೨ (೧)ನೇ ನಿಯಮದ ಅನುಸಾರವಾಗಿ ಈ ಸಭೆ ಸರ್ಕಾರಿ ಭರವಸೆಗಳ ಸಮಿತಿಗೆ ಎಂಟು ಜನ ಸದಸ್ಯರನ್ನು ಚುನಾಯಿಸುವುದು.

ಋ) ಕರ್ನಾಟಕ ವಿಧಾನ ಸಭೆಯು ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ ೨೮೩(೧)ನೇ ನಿಯಮದ ಅನುಸಾರವಾಗಿ ಈ ಸಭೆ ಖಾಸಗೀ ಸದಸ್ಯರ ವಿಧೇಯಕಗಳ ಹಾಗೂ ನಿರ್ಣಯಗಳ ಸಮಿತಿಗೆ ಹತ್ತು ಜನ ಸದಸ್ಯರನ್ನು ಚುನಾಯಿಸುವುದು

ಋೂ) ಕರ್ನಾಟಕ ವಿಧಾನ ಸಭೆಯು ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ ೨೮೬ನೇ ನಿಯಮದ ಅನುಸಾರವಾಗಿ ಈ ಸಭೆ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡಗಳ ಜಾತಿಯವರ ಕಲ್ಯಾಣ ಸಮಿತಿಗೆ ಒಂಭತ್ತು ಜನ ಸದಸ್ಯರನ್ನು ಚುನಾಯಿಸುವುದು

ಎ) ಕರ್ನಾಟಕ ವಿಧಾನ ಸಭೆಯು ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ ೨೮೮ನೇ ನಿಯಮದ ಅನುಸಾರವಾಗಿ ಈ ಸಭೆ ಹಿಂದುಳಿದ ವರ್ಗಗಳ ಕಲ್ಯಾಣ ಸಮಿತಿಗೆ ಒಂಭತ್ತು ಜನ ಸದಸ್ಯರನ್ನು ಚುನಾಯಿಸುವುದು.

ಏ ಕರ್ನಾಟಕ ವಿಧಾನ ಸಭೆಯು ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ ೩೫೩(೨)ನೇ ನಿಯಮದ ಅನುಸಾರವಾಗಿ ಈ ಸಭೆ ವಸತಿ ಸೌಕರ್ಯಗಳ ಸಮಿತಿಗೆ ಎಂಟು ಜನ ಸದಸ್ಯರನ್ನು ಚುನಾಯಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಗಮನ ಸೆಳೆಯುವಂತ ಸೂಚನೆಗಳು

1 ಪುತ್ತೂರು ತಾಲ್ಲೂಕಿನ ಈಶಾ ಪತ್ರಿಕೆಯು ಪ್ರಕಟಿಸಿರುವ ಕೋಮ್ಯುಗಲಭೆಯ ವಿಚಾರದ ಬಗ್ಗೆ

ಶ್ರೀ ಎಂ.ಎಸ್.ಕೃಷ್ಣನ್.—ಸನ್ಮಾನ್ಯ ಅಧ್ಯಕ್ಷರೇ ಹುಬ್ಬಳ್ಳಿ ಧಾರವಾಡ ಮಹಾನಗರಪಾಲಿಕೆಯ...

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ವಿಧಾನ ಪರಿಷತ್ತಿನಲ್ಲಿದ್ದಾರೆ ಅವರು ಬಂದ ತಕ್ಷಣ ತಮ್ಮ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಆಯಿತು

ಶ್ರೀವಿನಯಂಕುಮಾರ್ ಸೊರಕೆ.—ಮಾನ್ಯ ಅಧ್ಯಕ್ಷರೇ ಪುತ್ತೂರು ತಾಲ್ಲೂಕಿನ 'ಈಶಾ' ವಾರ ಪತ್ರಿಕೆಯ ಪ್ರಕಟಣೆಯೊಂದರಿಂದ ಉದ್ಭವಿಸಿರುವ ಕೋಮು ಗಲಭೆಯ ವಿಚಾರದ ಬಗ್ಗೆ ಗೃಹ ಸಚಿವರ ಗಮನ ಸೆಳೆಯುತ್ತೇನೆ.

ದಿನಾಂಕ ೨೧-೨-೧೯೮೭ರ ಈಶಾ ಪತ್ರಿಕೆಯಲ್ಲಿ ಹಿಂದೂ ದೇವರುಗಳ ಬಗ್ಗೆ ಅವಹೇಳನಕರವಾದ ಬರಹಗಳನ್ನು ಪ್ರಕಟಿಸಿರುವುದರಿಂದ ಪುತ್ತೂರು ಸ್ಥಳೀಯ ಹಿಂದೂ ಜಾಗರಣಾ ವೇದಿಕೆಯು ೨೮-೨-೮೭ರಂದು ಪುತ್ತೂರು ಬಂದ್‌ಗೆ ಕರೆ ನೀಡಿ ಒಂದು ಮೆರವಣಿಗೆಯನ್ನು ಏರ್ಪಡಿಸಿತ್ತು. ಮೆರವಣಿಗೆಯು ಶಾಂತವಾಗಿತ್ತು. ಆ ಪತ್ರಿಕೆಯ ಸಂಪಾದಕ ಶ್ರೀ ಇಸ್ಮಾಯಿಲ್ ಶಾಫಿ ಎಂಬುವರನ್ನು ೨೮-೨-೮೭ರಂದು ಬಂಧಿಸಿ ೯-೩-೧೯೮೭ರ ವರೆಗೆ ನ್ಯಾಯಾಂಗ ಅಭಿರಕ್ಷೆಗೆ ಒಪ್ಪಿಸಲಾಗಿದೆ. ಕೆಲವು ಮುಸ್ಲಿಂ ಯುವಕರು ಜುಮ್ಮಾ ಮಸೀದಿಯಿಂದ ದಾರಿ ಹೋಕರಿಗೆ ಕಲ್ಲು ತೂರಿದರು. ಇದರಿಂದ ೩ ಹಿಂದುಗಳಿಗೆ ಸಾಮಾನ್ಯ ಗಾಯಗಳಾದವು. ಈ ಸಂಬಂಧದಲ್ಲಿ ಪುತ್ತೂರಿನ ಪೋಲೀಸ್ ಸ್ಟೇಶನ್ನಿನಲ್ಲಿ ಒಂದು ಕೇಸನ್ನು ದಾಖಲು ಮಾಡಿ ೧೦ ಜನರನ್ನು ಬಂಧಿಸಲಾಗಿದೆ. ಇದರ ಪ್ರತಿಫಲವಾಗಿ ಒಂದು ಪೋಪೆಡನ್ನು ಮತ್ತು ಸೈಕಲನ್ನು ಸವಾರಿ ಮಾಡುತ್ತಿದ್ದ ಮುಸ್ಲಿಮರನ್ನು ಹಿಂದೂ ಯುವಕರು ತಡೆದು ನಿಲ್ಲಿಸಿ ಅದರ ಚಾಲಕರಿಗೆ ಹೊಡೆದರು. ಈ ಸಂಬಂಧದಲ್ಲಿ ಒಂದು ಕೇಸನ್ನು ದಾಖಲಿ ಮಾಡಿ ಹಿಂದೂ ಯುವಕನಾದ ವೇಣು ಎಂಬುವನನ್ನು ಬಂಧಿಸಲಾಗಿದೆ. ಸುಮಾರು ಸಾಯಂಕಾಲ ೬-೩೦ಕ್ಕೆ ಕೆಲವು ಹಿಂದೂ ಯುವಕರು ನೆಹರು ನಗರದಲ್ಲಿರುವ ಮಸೀದಿಗೆ ನುಗ್ಗಿ ಕೆಲವು ಮುಸ್ಲಿಮರಿಗೆ ಗಾಯ ಗಳಾಗುವಂತೆ ಥಳಿಸಿದರು. ರಾತ್ರಿ ೧೧-೩೦ಕ್ಕೆ ಕೆಲವರು ಅರಣಾ ಚಿತ್ರಮಂದಿರದ ಬಳಿ ಕೆಲವು ಮುಸ್ಲಿಂ ಯುವಕರಿಗೆ ಕಲ್ಲು ತೂರಿದರು ಸುಳ್ಯ ಮತ್ತು ಉಪ್ಪಿನಂಗಡಿಯಲ್ಲಿ ಹಿಂದೂಗಳು ದಿನಾಂಕ ೧-೩-೧೯೮೭ರಂದು ಏರ್ಪಡಿಸಿದ ಪ್ರತಿಭಟನಾ ಮೆರವಣಿಗೆಯು ಶಾಂತವಾಗಿ ಕೊನೆಗೊಂಡಿತು. ದಿನಾಂಕ ೨-೩-೧೯೮೭ರಂದು ರಾತ್ರಿ ಮುಸ್ಲಿಮರ ಮನೆಯ ಮೇಲೆ ಒಂದೂಗಳು ಕಲ್ಲು ತೂರಿದ ಸಣ್ಣಪುಟ್ಟ ಘಟನೆ ವರದಿಯಾಗಿದೆ.

ಪುತ್ತೂರು ತಾಲ್ಲೂಕಿನ ನರಿಮೊಗ್ರು ಗ್ರಾಮದ ಬೆದ್ರಾಳ ಎಂಬಲ್ಲಿ ದಿನಾಂಕ ೪-೩-೧೯೮೭ ರಂದು ರಾತ್ರಿ ಸುಮಾರು ೩ ಗಂಟೆಗೆ ಬೆಂಕಿ ಹಚ್ಚಿದ ಘಟನೆ ನಡೆದಿದೆ. ಈ ಬೆಂಕಿ ಹಚ್ಚಿದ ಗಲಭೆಯಲ್ಲಿ ೭ ಅಂಗಡಿಗಳ ಸಾಲಿನ ೫ ಅಂಗಡಿಗಳಿಗೆ ಹಾನಿ ಸಂಭವಿಸಿದೆ. ಪದ್ಮನಾಭ, ಹಾಜಿ ಬ್ಯಾರಿ ಹಾಗೂ ಇಬ್ರಾಹಿಂ ಎಂಬವರ ಅಂಗಡಿಗೆ ಬೆಂಕಿ ಹಚ್ಚಲಾಗಿದೆಯೆಂದು ಬೆದ್ರಾಳದ ಶ್ರೀ ಗಣೇಶ ಎಂಬವರಿಂದ ತಿಳಿಸಲ್ಪಟ್ಟ ಪೋಲೀಸಿನವರು ಈ ಮೊದಲೇ ಮಂಗಳೂರಿನಿಂದ ತರಿಸಿಟ್ಟ ಅಗ್ನಿಶಾಮಕದೊಡನೆ ಬೆದ್ರಾಳಕ್ಕೆ ಧಾವಿಸಿದರು. ಬೆಂಕಿಯಿಂದ ಹಾನಿಯಾದ ಅಂಗಡಿಗಳು ಇಟ್ಟಿಗೆಯಿಂದ ನಿರ್ಮಿಸಲ್ಪಟ್ಟಿದ್ದು ಹೆಂಚಿನ ತಾರಸಿಯದಾಗಿದೆ. ಈ ಕೆಳಗಿನ ಅಂಗಡಿಗಳಿಗೆ ಹಾನಿ ಸಂಭವಿಸಿರುತ್ತದೆ.

೧)	ಹಾಜಿ ಬ್ಯಾರಿಯವರ ಗ್ರಾಸರಿ ಅಂಗಡಿ	ರೂ. ೩,೦೦೦
೨)	ಇಬ್ರಾಹಿಂರವರ ಟೀ ಅಂಗಡಿ	ರೂ. ೩,೫೦೦
೩)	ಪದ್ಮನಾಭನವರ ಹೊಲಿಗೆ ಅಂಗಡಿ	ರೂ. ೧೦,೦೦೦
೪)	ಶೇನ ಭಂಡಾರಿಯವರ ಸೆಲೂನ ಅಂಗಡಿ	೧೦೦
೫)	ಶೇಖರ ಪೂಜಾರಿಯವರ ಅಂಗಡಿ	೯೦೦

ಇದಲ್ಲದೆ ಬೆಂಕಿಯಿಂದ ಉರಿದ ಹೆಂಚು ಮತ್ತು ಬೆಂಕಿ ಆರಿಸುವ ಸಂದರ್ಭದಲ್ಲಿ ಒಟ್ಟು ೫,೦೦೦ಗಳ ಹಾನಿಯುಂಟಾಗಿದೆ. ಪೈರು ಹಾಗೂ ಮರಗಳಿಗೆ ಸಂಭವಿಸಿದ ಹಾನಿಯೂ ಸುಮಾರು ರೂ. ೧೨,೦೦೦ ಮತ್ತು ವಿದ್ಯುತ್ ತಂತಿಗಳು ಹಾಗೂ ಪಂಖಿಗಳಿಗೆ ಸಂಭವಿಸಿದ ಹಾನಿ ಸುಮಾರು ೩,೦೦೦ ರೂ. ಹಾಗೂ ಸಂಭವಿಸಿದ ಒಟ್ಟು ಹಾನಿ ರೂ. ೩೬,೬೦೦-೦೦.

ಈ ಸಂಬಂಧದಲ್ಲಿ ಪುತ್ತೂರು ಪೋಲೀಸು ಠಾಣೆಯಲ್ಲಿ ಕ್ರೈಂ ಸಂ ೬೧/೮೭ನ್ನು ಐಪಿಸಿಯ ೪೩೬ನೇ ಸೆಕ್ಷನಿನಡಿಯಲ್ಲಿ ದಾಖಲು ಮಾಡಿ ತನಿಖೆ ನಡೆಸಲಾಗುತ್ತಿದೆ. ಮೇಲಿನ ಘಟನೆಯ ಕಾರಣ

ದಿಂದಾಗಿ ಪೋಲೀಸರು ಬಂದೋಬಸ್ತು ಮತ್ತು ಕಾವಲನ್ನು ಪುತ್ತೂರಿನ ೧೦ ಕಿ.ಮೀ ಆಸಪಾಸಿನಲ್ಲಿ ತೀವ್ರಗೊಳಿಸಲಾಗಿದೆ.

ಪುತ್ತೂರಿನಲ್ಲಿ ಸೆಕ್ಷನ್ ೧೪೪ ಸಿಆರ್‌ಪಿಸಿಯ ಅನ್ವಯ ದಿನಾಂಕ ೨೮-೨-೧೯೮೭ರಿಂದ ನಿಷೇದಾಜ್ಞೆಯನ್ನು ಜಾರಿಗೆ ತರಲಾಗಿದೆ. ಎಲ್ಲಾ ಜನಾಂಗದ ಮುಖಂಡರುಗಳು ಸೇರಿದ ಶಾಂತಿ ಸಮಿತಿ ಸಭೆಯನ್ನು ನಡೆಸಲಾಗಿದೆ. ಹಿರಿಯ ಪೋಲೀಸು ಅಧಿಕಾರಿಗಳು ಪುತ್ತೂರಿಗೆ ಭೇಟಿ ನೀಡಿ ಅಲ್ಲಿ ತಂಗಿದ್ದಾರೆ. ನಾನು ಕೂಡ ಈ ಸ್ಥಳಕ್ಕೆ ಭೇಡಿ ನೀಡಿ ನೊಂದವರಿಗೆ ಸಾಂತ್ವನ ನೀಡಿ ನಗರಗಳ ಮುಖಂಡರನ್ನು, ಬೇರೆ ಶಾಸಕರ ಮಂತ್ರಿ ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ಮುನ್ಸಿಪಾಲಿಟಿ ಅಧ್ಯಕ್ಷರು ಸೇರಿ ಶಾಂತಿ ಸಮಿತಿಯನ್ನು ಮಾಡಿ ಕೋಮು ಸೌಹಾರ್ದತೆಗೆ ಸಹಕರಿಸಬೇಕಾಗಿ ವಿನಂತಿಸಿದ್ದೇನೆ.

ಘಟನೆಯಲ್ಲಿ ನೊಂದವರಿಗೆ ಪರಿಹಾರ ಕೊಡಲಿಪ ಬಗ್ಗೆ ದಕ್ಷಿಣ ಕನ್ನಡ ಜಿಲ್ಲಾ ದಂಡಾಧಿಕಾರಿಗಳಿಂದ ಒಂದು ವರದಿಯನ್ನು ತರಿಸಿಕೊಂಡು ತಕ್ಷಣ ನೊಂದವರಿಗೆ ಪರಿಹಾರ ಮಂಜೂರು ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗಿದೆ. ಈ ಘಟನೆಯ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮ ಜರುಗಿಸಲಾಗುವುದು.

ಶ್ರೀ ವಿನಯಕುಮಾರ್ ಸೊರಕೆ.—ಮಾನ್ಯ ಅಧ್ಯಕ್ಷರೇ ಪುತ್ತೂರಿನಲ್ಲಿ ನಡೆದಂಥ ಘಟನೆ ಕೋಮು ಸೌಹಾರ್ಧತೆಗೆ ಧಕ್ಕೆ ತರುವಂತಹ ಹಾಗೂ ಪ್ರಚೋದನೆಯಿಂದ ತುಂಬಿದಂತಹ ಘಟನೆಯಾಗಿದೆ. ಇದರಲ್ಲಿ 'ಈಶಾ' ಪತ್ರಿಕೆಯ ಸಂಪಾದಕರು ಹಿಂದೂ ದೇವರ ಮೇಲೆ ಅವಮಾನ ತರುವಂತಹ ವಿಚಾರ ಬರೆದಿದ್ದಾರೆ.

ಅಧ್ಯಕ್ಷರು.—ಉತ್ತರದಲ್ಲಿ ಎಲ್ಲಾ ಬಂದಿದೆ, ಇನ್ನು ಮುಂದೆ ಈ ತರಹ ಘಟನೆ ಆಗದಂತೆ ಮುಂಜಾಗ್ರತೆ ವಹಿಸುತ್ತೀರಾ ಎಂದು ಕೇಳಿ ಬಿಡಿ ಸಾಕು.

ಶ್ರೀ ವಿನಯಕುಮಾರ್ ಸೊರಕೆ.—ಇದರಲ್ಲಿ ಪತ್ರಿಕೆಯನ್ನು ಮುದ್ರಣ ಮಾಡಿದಂಥ ಮುದ್ರಣ ಕಾರರನ್ನು ಅರೆಸ್ಟ್ ಮಾಡಿದ್ದಾರೆಯೇ ಇಲ್ಲವೇ ಎಂಬ ವಿವರಣೆ ಬಂದಿಲ್ಲ, ಅವರೂ ಕೂಡಾ ಇದಕ್ಕೆ ಕಾರಣಕರ್ತರು. ಇದರಲ್ಲಿ ಪ್ರಚೋದನೆ ಮಾಡುವಂತಹ ಕೈವಾಡ ಇದೆ. ಪತ್ರಿಕೆಯಲ್ಲಿ ಏನು ಬರೆದಿದ್ದಾರೆ, ಅದಕ್ಕೆ ಪ್ರೊಟೆಸ್ಟ್ ಮಾಡಿದ್ದಾರೆ. ಕೇರಳ ಸ್ಟೇಟ್‌ನಲ್ಲಿರುವ ಮಂಜೇಶ್ವರದಲ್ಲಿ ನಡೆಯುವಂತಹ ಚುನಾವಣೆಯಲ್ಲಿ ಇಲ್ಲಿ ಬರೆದಿರುವುದರ ಬಗ್ಗೆ ಹೇಳಿ, ಇದನ್ನು ಅಲ್ಲಿ ಹಬ್ಬಿಸುವಂತಹ ಒಂದು ಪ್ರಯತ್ನ ನಡೆಯುತ್ತಿದೆ. ಈ ದಿಸೆಯಲ್ಲಿ ಪ್ರಚೋದನೆ ನಡೆಯುತ್ತದೆ. ಪ್ರಚೋದನೆಗೆ ಅವಕಾಶ ಕೊಡ ಬಾರದು. ತಾವು ಜಾಗ್ರತೆಯಾಗಿ ಅಲ್ಲಿಗೆ ಬಂದಿದ್ದೀರಿ. ಆ ಜಾಗವನ್ನು ತಾವು ನೋಡಿದ್ದೀರಿ. ಆದರೆ ಪರಿಹಾರದ ಮಟ್ಟಿಗೆ ಹೇಳುವುದಾದರೆ ಇನ್ನೂ ಹೆಚ್ಚಿನ ರೀತಿಯಲ್ಲಿ ಪರಿಹಾರ ಕೊಡಬೇಕು. ಬಹಳ ಕಡಿಮೆ ಮೌಲ್ಯವನ್ನು ಕೊಟ್ಟಿದ್ದಾರೆ. ಹೆಚ್ಚಿನ ಪರಿಹಾರ ಸಿಗುವಂತಹ ರೀತಿಯಲ್ಲಿ ತಾವು ಸಹಾಯ ಮಾಡಿಕೊಡಬೇಕು. ಹಾಗೂ ಎಲ್ಲರಲ್ಲೂ ಕೋಮುಸೌಹಾರ್ದ ಬರುವ ರೀತಿಯಲ್ಲಿ ತಾವು ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಗೃಹಸಚಿವರು ಪುತ್ತೂರು ಮತ್ತು ಆಸಪಾಸುಗಳಲ್ಲಿ ತನಿಖೆಯನ್ನು ನಡೆಸಿದ್ದಾರೆ. ವಿಷಯದ ಗಂಭೀರತೆಯನ್ನು ಸಹ ಅರ್ಥ ಮಾಡಿಕೊಂಡಿದ್ದಾರೆ. ಆದರೆ ಇಲ್ಲಿ ಮೂಲಭೂತವಾಗಿರತಕ್ಕಂಥ ಪ್ರಶ್ನೆ ಏನೆಂದರೆ, ಪುತ್ತೂರಿನಲ್ಲಿ ಮತ್ತು ಆಸಪಾಸಿನಲ್ಲಿ ಈ ರೀತಿಯ ಘಟನೆಗಳು ಇದಂ ಪ್ರಥಮತಹಃವಲ್ಲ. ಇದೇ ರೀತಿಯ ಘಟನೆಗಳು ಅನೇಕ ಭಾರಿ ನಡೆದಿವೆ. ಇದೊಂದು ಕೋಮುವಾರು ವಿಷಯ. ಈ ವಿಷಯವನ್ನು ಆದಷ್ಟು ಬೇಗ ಪರಿಹಾರ ಮಾಡಬೇಕು. ಈ ರೀತಿಯ ಘಟನೆಗಳು ಒಳಗೊಳಗೆ ಆಗಾಗ ನಡೆಯುತ್ತಿರುತ್ತವೆ. ಈ ಘಟನೆಗಳು ಬೂದಿ ಮುಚ್ಚಿದ ಕೆಂಡವಿದ್ದಂತೆ. ಇದಕ್ಕೆ ಮಾನ್ಯ ಮಂತ್ರಿಗಳು ಒಂದು ಶಾಶ್ವತವಾದಂಥ ಪರಿಹಾರವನ್ನು ಕಂಡುಹಿಡಿಯಬೇಕು. ಈ ಬಗ್ಗೆ ಮಾನ್ಯ ಮಂತ್ರಿಗಳು ತಮ್ಮನ್ನು ಕರೆದು ಒಂದು ಸಭೆಯನ್ನು ಮಾಡಿದರೆ ಖಂಡಿತವಾಗಿ ನಾವು ಸಹ ನಮ್ಮ ಸಹಕಾರವನ್ನು ಕೊಟ್ಟು ಸೂಕ್ತ ಸಲಹೆ ಗಳನ್ನು ಕೊಡುತ್ತೇವೆ. ಈ ಘಟನೆಯಲ್ಲಿ ಹಿನ್ನೆಲೆಯಲ್ಲಿ ಯಾರಿದ್ದಾರೆ ? ಇದರ ಹಿಂದೆ ಯಾರ ಕೈವಾಡ ವಿದೆ ಎನ್ನುವುದನ್ನು ಸರ್ಕಾರದವರು ಪತ್ತೆ ಹಚ್ಚಬೇಕು. ಈ ರೀತಿಯ ಘಟನೆಗಳಾಗದಂತೆ ಶಾಶ್ವತ

ವಾದಂಥ ಪರಿಹಾರವನ್ನು ಕಂಡುಹಿಡಿಯಬೇಕು. ಈ ಬಗ್ಗೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಶ್ರೀ ಕೆ. ವಸಂತಬಂಗೇರ,—ಮಾನ್ಯ ಅಧ್ಯಕ್ಷರೇ, ಈ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ಬೆಳ್ತಂಗಡಿಯಲ್ಲಿ ಕೂಡ ಗಲಾಟೆ ನಡೆದಿದೆ. ಈ ಘಟನೆಗೆ ಕಾರಣವೇನೆಂದರೆ, ಹಿಂದೂ ದೇವರ ಬಗ್ಗೆ ಒಂದು ಪತ್ರಿಕೆಯಲ್ಲಿ ಬಂದ ಲೇಖನವೇ ಕಾರಣ. ಇದಕ್ಕೆ ಬೇರೆ ಯಾರ ಪ್ರಚೋದನೆ ಕೂಡ ಇಲ್ಲ. ಆ ಪತ್ರಿಕೆಯಲ್ಲಿ ಏನು ಬರೆದಿದ್ದರು ಎನ್ನುವುದನ್ನು ನಾನು ಈ ಸಭೆಯ ಗಮನಕ್ಕೆ ತರಿಬಯಸುವುದಾದರೆ ಅದು ಈ ರೀತಿ ಇದೆ.....

ಅಧ್ಯಕ್ಷರು.—ಪತ್ರಿಕೆಯಲ್ಲಿ ಏನು ಬಂದಿದೆ, ಅದನ್ನು ಇಲ್ಲಿ ತಾವು ಓದುವುದು ಬೇಡ, ನೇರವಾಗಿ ತಮಗೇನು ಬೇಕೋ ಅದನ್ನು ಕೇಳಿ.....

ಶ್ರೀ ಕೆ. ವಸಂತಬಂಗೇರ.—ಮಾನ್ಯ ಅಧ್ಯಕ್ಷರೇ ಆ ಘಟನೆಗೆ ಹಿನ್ನೆಲೆ ಏನೆಂದರೆ.....

ಅಧ್ಯಕ್ಷರು.—ತಾವು ಅದನ್ನೆಲ್ಲಾ ಇಲ್ಲಿ ಪ್ರಸ್ತಾಪ ಮಾಡಬೇಕಾಗಿಲ್ಲ. ತಾವು ಈ ರೀತಿ ಮಾಡಿದರೆ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. Don't record.

* * *

(ಗೊಂದಲ)

ಶ್ರೀ ಕೆ. ವಸಂತಬಂಗೇರ.—ಮಾನ್ಯ ಅಧ್ಯಕ್ಷರೇ ಆ ಪತ್ರಿಕೆಯಲ್ಲಿ.....

ಅಧ್ಯಕ್ಷರು.—ತಾವೇನು ಹೇಳಿದರೂ ಅದು ರೆಕಾರ್ಡ್ ಆಗುವುದಿಲ್ಲ.

ಶ್ರೀ ಕೆ. ವಸಂತಬಂಗೇರ.—ಪತ್ರಿಕೆಯಲ್ಲಿ ಏನು ಬಂದಿದೆ ಎಂದು ಹೇಳದಿದ್ದರೆ, ಅದು ಹೇಗೆ ಸಾಧ್ಯ ?

ಅಧ್ಯಕ್ಷರು.—ಮಾನ್ಯ ವೀರಪ್ಪ ಮೊಯಿಲಿಯವರು ಯಾವ ರೀತಿ ಮಾತನಾಡಿದರು ಆ ರೀತಿ ಮಾತನಾಡಿ. ಅದು ಬಿಟ್ಟು.....

ಶ್ರೀ ಕೆ. ವಸಂತಬಂಗೇರ.—ಇಂತಹ ಕಪೋಲ ಕಲ್ಪಿತವಾದಂತಹ ಲೇಖನಗಳನ್ನು ಬರೆಯುವುದನ್ನು ನಿಲ್ಲಿಸಬೇಕು ಆ ಪತ್ರಿಕೆಯನ್ನು ಸರ್ಕಾರದವರು ಮುಟ್ಟುಗೋಲು ಹಾಕಿಕೊಂಡು ಅವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಬಿ. ರಾಚಯ್ಯ. ಸನ್ಮಾನ್ಯ ಅಧ್ಯಕ್ಷರೇ, ಈ ವಿಚಾರವನ್ನು ನಾವು ಹೆಚ್ಚು ಬೆಳೆಸಿದಷ್ಟು ಪ್ರಚೋದನೆಗೆ ಅವಕಾಶ ಮಾಡಿಕೊಟ್ಟಂತೆ ಆಗುತ್ತದೆ. ಮಾನ್ಯ ಸದಸ್ಯರಾದಂಥ ಶ್ರೀಮಾನ್ ವೀರಪ್ಪ ಮೊಯಿಲಿಯಂವರು ಹೇಳಿದ ಹಾಗೆ ಈ ಕೋಮುವಾರು ಘಟನೆಗಳನ್ನು ಶಮನ ಮಾಡುವ ಸಲುವಾಗಿ ಒಂದು ಸಭೆಯನ್ನು ಕರೆಯಬೇಕೆಂದು ಹೇಳಿದ್ದಾರೆ. ಅದಕ್ಕೆ ನಾನೂ ಸಹ ಒಪ್ಪಿಕೊಂಡಿದ್ದೇನೆ. ನಾನು ಆಲ್ಲಿಗೆ ಹೋಗಿದ್ದಾಗ ಮಾನ್ಯ ಸದಸ್ಯರಾದ ವಿನಯಂಕುಮಾರ್‌ರವರು ನನ್ನ ಜೊತೆಯಲ್ಲೇ ಇದ್ದರು. ಅವರ ಜೊತೆಯಲ್ಲಿ ನಾನು ಎಲ್ಲಾ ಕಡೆ ಹೋಗಿ ಬಂದಿದ್ದೇನೆ. ಅಲ್ಲಿ ಮುಸ್ಲಿಮರು ಕೂಡ ಆ ಪತ್ರಿಕೆಯ ಸಂಪಾದಕರು ಎಲ್ಲಿದ್ದಾರೆಂದು ಹುಡುಕಿಕೊಟ್ಟಿದ್ದಾರೆ. ಹಿಂದೂಗಳ ದೇವರುಗಳನ್ನು ಅವಹೇಳನ ಮಾಡಿ ಕೋಮು ಗಲಭೆಗೆ ಕಾರಣರಾದ ಆ ಸಂಪಾದಕರನ್ನು ಶಿಕ್ಷಿಸಬೇಕೆಂದು ಮುಸ್ಲಿಮರ ಗಣ್ಯರೇ ಹೇಳಿದ್ದಾರೆ. ಬೆಂಗಳೂರಿನಲ್ಲಿ ಹಾಗೂ ಇತರ ಕಡೆ ನಡೆದಂಥ ಕೋಮು ಗಲಭೆಗಳಲ್ಲಿ ಹಿಂದೂ ಮುಖಂಡರು ಮತ್ತು ಮುಸ್ಲೀಮ್ ಮುಖಂಡರುಗಳು ಕೋಮು ಸೌಹಾರ್ದತೆಗೆ ಸಹಕಾರ ಕೊಟ್ಟಿದ್ದಾರೆ. ಗಲಭೆಗಳಾದ ಪ್ರದೇಶಕ್ಕೆ ನಾನು ಮೊನ್ನೆ ಹೋಗಿದ್ದೆ. ನನ್ನ ಜೊತೆಯಲ್ಲಿ ಮಾನ್ಯ ಸದಸ್ಯರಾದ ವಿನಯಕುಮಾರ್‌ರವರು ಮತ್ತು ಅಮರನಾಥಶೆಟ್ಟಿಯವರು ಸಹ ಇದ್ದರು. ನಷ್ಟವಾಗಿರತಕ್ಕಂಥ ಜನರಿಗೆ ಪರಿಹಾರ ಕೊಡುವುದಕ್ಕೆ ಅಂದಾಜುಗಳನ್ನು ತಯಾರು ಮಾಡಲಾಗುತ್ತಿದೆಯೆಂದು ಅಧಿಕಾರಿಗಳು ತಿಳಿಸಿದ್ದಾರೆ. ಪರಿಹಾರದ ಅಂದಾಜನ್ನು ರಫ್ ಆಗಿ ಕಳುಹಿಸಿಕೊಟ್ಟಿದ್ದಾರೆ. ಜಿಲ್ಲಾಧಿಕಾರಿಗಳು

---

*as ordered not recorded.

ಅಲ್ಲೇ ಇದ್ದುದರಿಂದ ಪರಿಹಾರ ಕೊಡುವುದಕ್ಕೆ ಕೂಡಲೇ ವ್ಯವಸ್ಥೆಯನ್ನು ಅವರು ಮಾಡುತ್ತಾರೆ. ಶಾಶ್ವತವಾಗಿ ಕೋಮುಗಲಭೆ ಆಗದ ರೀತಿಯಲ್ಲಿ ಪರಿಹಾರವನ್ನು ಕಂಡು ಹಿಡಿಯಲಿಕ್ಕೆ ಶಾಂತಿಕೊಪ್ಪದಲ್ಲಿ ಜನರು ಮೀಟಿಂಗ್‌ನ್ನು ಮಾಡಿದ್ದಾರೆ. ಮೈಸೂರಿನಲ್ಲೂ ಸಹ ಸುಮಾರು ನಾಲ್ಕೈದು ಸಾವಿರ ಜನರು ಸೇರಿಕೊಂಡು ಮೀಟಿಂಗ್ ಮಾಡಿದ್ದಾರೆ. ಕೋಮು ಗಲಭೆಗಳಿಗೆ ಅವಕಾಶವಾಗದ ರೀತಿಯಲ್ಲಿ ಎಲ್ಲರೂ ನಡೆದುಕೊಳ್ಳಬೇಕು. ಪೋಲೀಸರು ಸಹ ಈ ಗಲಭೆಗಳನ್ನು ತಡೆಯುವುದಕ್ಕೆ ಸಾಕಷ್ಟು ಕೆಲಸ ಮಾಡಿದ್ದಾರೆ. ಒಂದು ಕಡೆ ಜಮಾಯೀತ್ ಇಸ್ಲಾಮ್‌ನವರು ಮತ್ತೊಂದು ಕಡೆ ವಿಶ್ವ ಹಿಂದೂ ಪರಿಷತ್ ನವರು ಜಾತಿ ವಾದವನ್ನು ಇಟ್ಟುಕೊಂಡು ಭಾಷಣವನ್ನು ಮಾಡುತ್ತಾರೆಂದು ತಿಳಿದು ಬಂದಿದೆ ಯಾರು ಇಂತಹ ಪ್ರಚೋದನೆ ಮಾಡುವ ರೀತಿಯಲ್ಲಿ ಮಾತನಾಡುತ್ತಾರೋ ಅವರ ಮೇಲೆ ಪೋಲೀಸಿನವರು ಮತ್ತು ಸರ್ಕಾರದವರು ಮುಂಜಾಗರೂಕತೆ ಕ್ರಮ ತೆಗೆದುಕೊಳ್ಳುತ್ತಾರೆ. ಪೋಲೀಸಿನವರು ಅಲ್ಲಿ ನಡೆದಂಥ ಗಲಭೆ ವಿಷಯದಲ್ಲಿ ಬಹಳ ಜಾಗರೂಕತೆಯಿಂದ ನಡೆದುಕೊಂಡಿದ್ದಾರೆ. ಗಲಭೆಗಳು ಆಗದೇ ಇರುವುದಕ್ಕೆ ಅಲ್ಲಿನ ಜನರು ಪೋಲೀಸರ ಜೊತೆಯಲ್ಲಿ ಸಹಕಾರ ಮಾಡಬೇಕು ಶಾಶ್ವತವಾಗಿ ಇಂಥ ಘಟನೆಗಳು ಆಗದ ರೀತಿಯಲ್ಲಿ ನಡೆಯುವುದಕ್ಕೆ ಮಾನ್ಯ ಸದಸ್ಯರು ನೀಡುವ ಸಲಹೆಗಳನ್ನು ಕೇಳಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆಂದು ಈ ಸಂದರ್ಭದಲ್ಲಿ ಆಶ್ವಾಸನೆಯನ್ನು ಕೊಡುತ್ತೇನೆ.

ನಿಯಮ ೩೩ಳಿರ ಮೇರೆಗೆ ಚರ್ಚೆ

ಅಧ್ಯಕ್ಷರು.— ಈಗ ೩೩ಳಿರ ನಿಯಮದ ಮೇಲೆ ಚರ್ಚೆ. ಮಾನ್ಯ ಶ್ರೀ ಕೆ. ಎಲ್. ಶಿವಲಿಂಗೇಗೌಡರು.

(ಮಾನ್ಯ ಶ್ರೀ ಕೆ. ಎಲ್. ಶಿವಲಿಂಗೇಗೌಡರು ಸದನದಲ್ಲಿ ಹಾಜರಿರಲಿಲ್ಲ)

ಅಧ್ಯಕ್ಷರು.— ಶ್ರೀ ವಸಂತ ಬಂಗೇರರವರು,

1) ಬೆಳ್ತಂಗಡಿ ತಾಲ್ಲೂಕಿನಲ್ಲಿ ಸರಕಾರಿ ಜಮೀನು ಹಾಗೂ ಅರಣ್ಯ ಭೂಮಿಯನ್ನು ಅಕ್ರಮಣ ಮಾಡಿದ ಕಂಟುಂಬಗಳ ಬಗ್ಗೆ

ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).— ಮಾನ್ಯ ಅಧ್ಯಕ್ಷರೇ, ಬೆಳ್ತಂಗಡಿ ತಾಲ್ಲೂಕಿನಲ್ಲಿ ಸುಮಾರು ೮,೦೦೦ಕ್ಕೂ ಮಿಕ್ಕಿ ಕಂಟುಂಬಗಳು, ಸರಕಾರಿ ಜಮೀನು ಹಾಗೂ ಅರಣ್ಯ ಭೂಮಿಯಲ್ಲಿ ಸುಮಾರು ೨೫ ರಿಂದ ೩೦ ವರ್ಷಗಳ ಹಿಂದಿನಿಂದಲೂ ಅಕ್ರಮಣ ಮಾಡಿ ಹಟ್ಟಿ, ಕೊಟ್ಟಿಗೆ, ಮನೆಗಳನ್ನು ಕಟ್ಟಿಕೊಂಡು ಕೃಷಿ ಮಾಡಿ ಜೀವನ ಸಾಗಿಸುತ್ತಾ ಇದ್ದಾರೆ. ಈ ರೀತಿ ಅಕ್ರಮಣ ಮಾಡಿ ಕೃಷಿ ಮಾಡಿ ಜೀವನ ಸಾಗಿಸುತ್ತಿರುವ ಕಂಟುಂಬಗಳಲ್ಲಿ ಕೆಲವರು ತಾವು ಅಕ್ರಮಣ ಮಾಡಿದ ಸ್ಥಳಗಳಲ್ಲಿ ಗೇರು ಕೃಷಿಯನ್ನು ಮಾಡಿದ್ದರೂ, ಪ್ರಕೃತ ಅವುಗಳಲ್ಲಿ ಫಲ ಬರುತ್ತಿದ್ದರೂ ಕೂಡಾ, ತಾವು ಕಷ್ಟಪಟ್ಟು ಬೆಳೆಸಿದ ಗೇರು ಮರಗಳ ಫಲವನ್ನು ಅರಣ್ಯ ಇಲಾಖೆಯ ಅಧಿಕಾರಿಗಳ ಕೃಪೆಯಿಂದ ಕೆಲವು ವರ್ಷಗಳಿಂದ ಈ ಪ್ರಯೋಜನಾರ್ಥಿಗಳು ಫಲವನ್ನು ಪಡೆಯುವುದಕ್ಕೆ ವಿಫಲರಾಗಿರುತ್ತಾರೆ, ಕಾರಣ, ಅರಣ್ಯ ಇಲಾಖೆಯ ಅಧಿಕಾರಿಗಳು ಅರಣ್ಯ ಇಲಾಖೆಗೆ ಸಂಬಂಧಿಸಿದ ಗೇರು ತೋಟಗಳನ್ನು ಪ್ರತಿವರ್ಷವೂ ಹರಾಜು ಮಾಡುತ್ತಿದ್ದಾರೆ. ಹೀಗೆ ಪಡೆದುಕೊಂಡ ಕಂಟ್ರಾಕ್ಟ್‌ದಾರರು ಮತ್ತು ಅರಣ್ಯ ಇಲಾಖೆಯ ಅಧಿಕಾರಿಗಳಿಂ ಶಾಮಿಲಾಗಿ ಬೆಳ್ತಂಗಡಿ ತಾಲ್ಲೂಕಿನಲ್ಲಿ ಅಕ್ರಮಣ ಮಾಡಿ ಜೀವನ ಸಾಗಿಸುತ್ತಿರುವ ಕುಟುಂಬಗಳು ಬೆಳೆಸಿದ ಗೇರು ಕೃಷಿಯನ್ನು ಬಲಾತ್ಕಾರದಿಂದ ಕೊಯ್ದು ಸಾಗಿಸುತ್ತಿದ್ದಾರೆ. ಅಕ್ರಮಣಕಾರರಂ ಬೆಳೆಸಿದ ಗೇರು ಬೆಳೆಯನ್ನು ಇಲಾಖೆಯವರು ಮತ್ತು ಕಂಟ್ರಾಕ್ಟ್‌ದಾರರು ಕೊಯ್ಯುವ ಸಂದರ್ಭದಲ್ಲಿ ಸದ್ರಿ ಗೇರು ಬೆಳೆಯನ್ನು ಸರ್ಕಾರ ಹರಾಜು ಮಾಡಲಾಗಿದೆ ಎಂದು ಅರಣ್ಯ ಇಲಾಖೆಯ ಅಧಿಕಾರಿಗಳು ಗದರಿಸಿ ಅದರ ಫಲವನ್ನು ಬಲಾತ್ಕಾರವಾಗಿ ಕೊಂಡು ಹೋಗುತ್ತಿದ್ದಾರೆ. ಈ ರೀತಿ ಅರಣ್ಯ ಇಲಾಖೆಯ ಅಧಿಕಾರಿಗಳು ಮತ್ತು ಕಂಟ್ರಾಕ್ಟ್‌ದಾರರ ಬಲಾತ್ಕಾರದಿಂದ ಬೆಳ್ತಂಗಡಿ ತಾಲ್ಲೂಕಿನಲ್ಲಿ ಸಾವಿರಾರು ಬಡ ಕುಟುಂಬಗಳು ಅನ್ಯಾಯಕ್ಕೆ ಹಾಗೂ ನಷ್ಟಕ್ಕೆ ಒಳಗಾಗಿವೆ. ಈ ಬಡವರಿಗೆ ಆದ ಅನ್ಯಾಯಕ್ಕೆ ನ್ಯಾಯ, ಮತ್ತು ಅವರಿಗಾದ ನಷ್ಟವನ್ನು ತುಂಬಬೇಕಾಗಿದೆ. ಈ ಪ್ರಕರಣದಲ್ಲಿ ಶಾಮಿಲಾದ ಅಧಿಕಾರಿಗಳ ಹಾಗೂ ಕಂಟ್ರಾಕ್ಟ್‌ದಾರರ ವಿರುದ್ಧ ಸೂಕ್ತ ಕ್ರಮಂ ಕೈಗೊಂಡು